ಈ ವಿಚಾರದಲ್ಲಿ ಅವರ ಜೊತೆಗೆ ಕೂಳಿತುಕೊಂಡು ಮಾತನಾಡಲಿಕ್ಕೆ ಸರ್ಕಾರ ಸಿದ್ಧವಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಅಂತರ ರಾಜ್ಯ ಬಸ್ಸುಗಳ ಕುರಿತಂ

೨೯೫೪. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಲ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೬-೬೭, ೧೯೬೭-೬೮ ಮತ್ತು ೧೯೬೮-೬೯ರಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತಮಿಳು ನಾಡು, ಕೇರಳ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳ ನಡುವೆ ಓಡಿಸಲಾದ ಬಸ್‌ಗಳ ಸಂಖ್ಯೆ?

ಆ) ಯಾವ ಒಪ್ಪಂದ ಮಂತ್ತು ಷರತ್ತುಗಳ ಮೇಲೆ ಈ ವಾಹನಗಳಂ ಓಡಾಡುತ್ತಿದ್ದವು?

ಇ) ಈ ಒಪ್ಪಂದ ಮತ್ತು ಷರತ್ತುಗಳು ಸರ್ಕಾರಕ್ಕೆ ಅಹಿತಕರವಾಗಿದೆ ಎಂಬುದು ನಿಜವೇ?

ಈ) ಹಾಗಿದ್ದಲ್ಲಿ, ಇದನ್ನು ಸಮುದೂಗಿಸಲು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಇತರ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯದ ವಾಹನಗಳಂ

	ಆಂಧ್ರಪ್ರದೇಶ್	ತಮಿಳುನಾಡು	ಕೇರಳ	ಮಹಾರಾಷ್ಟ್ರ	ಗೋವಾ
೧೯೬೬-೬೭	೫೫೭	೧೬೫	೭೫	೩೪೦+೧	೨೧
೧೯೬೭-೬೮	೫೬೭	೧೬೫	೭೫	೩೪೩+೧	೭೦
೧೯೬೮-೬೯	೫೮೨	೧೬೫	೭೫	೩೪೩+೧	೨೪

ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕೇರಳ ಮಂತ್ತು ಗೋವಾ ರಾಜ್ಯಗಳ ವಾಹನಗಳು ಕರ್ನಾಟಕದಲ್ಲಿ

	ಆಂಧ್ರಪ್ರದೇಶ್	ತಮಿಳುನಾಡು	ಕೇರಳ	ಮಹಾರಾಷ್ಟ್ರ	ಗೋವಾ
೧೯೬೬-೬೭	೩೧೫	೧೯೮	೨೨	ಸಿಂಗಲ್ ಪಾಯಿಂಟ್	೪೪
೧೯೬೭-೬೮	೩೩೫	೧೯೮	೨೨	ತೆರಿಗೆ ಆಧಾರದ	೪೪
೧೯೬೮-೬೯	೩೪೧	೧೯೮	೨೨	ಮೇರೆಗೆ ಮೇಲು ಸಹಿ ಪಡೆಯಲು ಅವಕಾಶವಿರುವುದಿಲ್ಲ	೫೦

ಆ) ವಾಹನಗಳು ಅಂತರರಾಜ್ಯ ನಿಯಮ ಮತ್ತು ಪರಸ್ಪರ ಒಪ್ಪಂದದ ಮೇಲೆ ಸಿಂಗಲ್ ಪಾಯಿಂಟ್ ತೆರಿಗೆಯಲ್ಲಿ (ಪಕ್ಕ) ನಿರಂತರ ಪರವಾನಿಗೆ ಹೊಂದಿ ಒಪ್ಪಂದದ ಪ್ರಕಾರ ಮಾರ್ಗಗಳಲ್ಲಿ ಮಂತ್ತು ಒಪ್ಪಂದಕ್ಕೆ ಹೊರತಾದ ವಾಹನಗಳು ಡಬ್ಬಲ್ ಪಾಯಿಂಟ್ ತೆರಿಗೆಯಲ್ಲಿ ತಾತ್ಕಾಲಿಕ ಪರವಾನಿಗೆಯಲ್ಲಿ ಓಡುತ್ತವೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಇಂಟರ್ ಸ್ಟೇಟ್ ಬಸ್ಸುಗಳ ಬಗ್ಗೆ ಕೇಳಿದ್ದೇನೆ. ಮಾನ್ಯ ಸಚಿವರು ಬಸ್ ಪ್ಯಾರಿಟಿ ಮೈಂಟೆನ್ ಮಾಡಿದ್ದಾರೆಯೇ, ಇಲ್ಲದೇ ಹೋದರೆ ಕಿಲೋಮೀಟರ್ ಪ್ಯಾರಿಟಿ ಮೈಂಟೆನ್ ಮಾಡಿದ್ದಾರೆಯೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ನಾನು ''ಈ ಒಪ್ಪಂದ ಮತ್ತು ಷರತ್ತುಗಳು ಸರ್ಕಾರಕ್ಕೆ ಅಹಿತಕರವಾಗಿರುವುದು ನಿಜವೇ'' ಎಂದು ಕೇಳಿದ್ದೇನೆ, ಅದಕ್ಕೆ ಅವರು ''ಇಲ್ಲ'' ಎಂದು ಹೇಳಿದ್ದಾರೆ ಇದು ಅಹಿತಕರವಾಗಿದೆ, ನಮ್ಮ ಸರ್ಕಾರಕ್ಕೆ ೩ ಕೋಟಿ ರೂಪಾಯಿಗಳ ಟ್ಯಾಕ್ಸ್ ಕೂಡ ಅನ್ಯಾಯವಾಗುತ್ತಿದೆ. ಇನ್ನೊಂದು ಇವರು ಬಸ್ ಪ್ಯಾರಿಟಿ ಏಕೆ ಇನ್‌ಸಿಸ್ಟ್ ಮಾಡುತ್ತಾ ಇಲ್ಲ. ನಾವು ಇನ್ನೂರು ಮೈಲಿ ಕೊಟ್ಟರೆ,

ಆಂಧ್ರದವರು ಇನ್ನೂರು ಮೈಲಿ ಕೊಡಬೇಕು ಇದನ್ನು ಯಾವ ಬೇಸಿಸ್ ಮೇಲೆ ಅನುಸರಿಸಿಕೊಂಡು ಹೋಗುತ್ತಿದ್ದೀರಿ ಬಸ್ ಟು ಬಸ್ ಪ್ಯಾರಿಟಿ ಅಥವಾ ಕಿಲೋಮೀಟರ್ ಟು ಕಿಲೋಮೀಟರ್ ಪ್ಯಾರಿಟಿಯೇ ? ಇದರಿಂದ ಕರ್ನಾಟಕಕ್ಕೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಸಿದ್ಧರಾಮಯ್ಯ.— ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಅಂತರ ರಾಜ್ಯ ಒಪ್ಪಂದಗಳ ಮೇಲೆ ಓಡಿಸತಕ್ಕ ಬಸ್ಸುಗಳಿಗೆ ಪ್ಯಾರಿಟಿ ಇಲ್ಲ, ದೂರದ ಪ್ಯಾರಿಟಿ ಇಲ್ಲ ಹೀಗಾಗಿ ನಮ್ಮ ಕರ್ನಾಟಕ ರಾಜ್ಯಕ್ಕೆ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಇದಕ್ಕೆ ನಮಗೆ ಅಹಿತಕರವಾಗಿಲ್ಲ, ನಷ್ಟವಾಗಿಲ್ಲ ಎಂಬ ಉತ್ತರವನ್ನು ಕೊಟ್ಟಿದ್ದೇವೆ. ಒಪ್ಪಂದದ ಪ್ರಕಾರ ಕೆಲವು ರಾಜ್ಯಗಳಿಗೆ ಹೋಲಿಸಿದರೆ,ಕಿಲೋಮೀಟರ್ ಪ್ಯಾರಿಟಿಯಲ್ಲಿ ಅವರಿಗಿಂತ ಹೆಚ್ಚು ಕಿಲೋಮೀಟರನ್ನು ನಾವು ಓಡಿಸಿದ್ದೇವೆ ಕರ್ನಾಟಕದವರು ಆಂಧ್ರಪ್ರದೇಶದಲ್ಲಿ ೧,೧೫,೬೭೩ ಕಿಲೋಮೀಟರ್ ಓಡಿಸಿದ್ದೇವೆ. ಆಂಧ್ರದವರು ೧,೦೨,೯೦೬ ಕಿಲೋಮೀಟರ್ ಓಡಿಸಿದ್ದಾರೆ. ಇದರಿಂದ ಅವರಿಗಿಂತ ನಮಗೇ ೨,೬೬೭ ಕಿಲೋಮೀಟರ್ ಅಡ್ವಾಂಟೇಜ್ ಇದೆ. ನಾವೇ ಅವರಿಗಿಂತ ಹೆಚ್ಚಾಗಿ ಓಡಿಸಿದ್ದೇವೆಂಬುದು ಗೊತ್ತಾಗುತ್ತದೆ. ಇದರಿಂದ ನಮಗೆ ಹೆಚ್ಚು ಲಾಭವಾಗಿದೆ. ಅಹಿತಕರವಾಗಿರುವುದು ಏನೂ ಇಲ್ಲ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾವಮಯ್ಯ.— ಈಗಲೂ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮದ್ರಾಸ್–ಬೆಂಗಳೂರು ನಡುವೆ ಕರ್ನಾಟಕದ ಬಸ್ಸುಗಳು ೫೬ ಇದ್ದರೆ, ಆಂಧ್ರ ಬಸ್ಸುಗಳು ೨೦ ಇರುತ್ತವೆ. ತಮಿಳುನಾಡಿನ ಬಸ್ಸುಗಳು ೨೬ಕ್ಕಿಂತ ಜಾಸ್ತಿ ಇರುತ್ತವೆ. ಈ ರೀತಿ ನಡೆಯುತ್ತಿದ್ದರೂ ಕೂಡ ಮಾನ್ಯ ಮಂತ್ರಿಗಳು ಇದನ್ನು ವೆರಿಫೈ ಮಾಡಿ, ಅನ್ಯಾಯವಾಗುತ್ತಿದೆ ಇದನ್ನು ಸರಿಪಡಿಸುತ್ತೇವೆ ಎಂದು ಹೇಳತಕ್ಕ ಸೌಜನ್ಯವನ್ನೂ ತೋರಿಸುತ್ತಿಲ್ಲ. ಆಮೇಲೆ ತಿರುಪತಿ ಟು ಬೆಂಗಳೂರು, ಅವರ ಬಸ್ಸುಗಳು ೨೦ ಓಡುತ್ತಿದ್ದರೆ, ನಮ್ಮ ಬಸ್ಸುಗಳು ಕೇವಲ ೫ ಓಡುತ್ತಿದೆ. ವೆಲ್ಲೂರಿನ ಟು ಬೆಂಗಳೂರು, ತಮಿಳುನಾಡಿನವರು ೧೦ ಬಸ್ಸುಗಳನ್ನು ಓಡಿಸುತ್ತಿದ್ದರೆ, ನಮ್ಮದು ಕೇವಲ ೪ ಬಸ್ಸುಗಳು ಮಾತ್ರ ಓಡುತ್ತಿವೆ ಮದ್ರಾಸ್ ಟು ಬೆಂಗಳೂರು ಕೂಡ ಅವರದೇ ಜಾಸ್ತಿ ಇದೆ. ಇದರಿಂದ ನಮ್ಮ ಕರ್ನಾಟಕಕ್ಕೆ ಏಕೆ ಅನ್ಯಾಯವಾಗಬೇಕು ? ಬಸ್ ಟು ಬಸ್ ಪ್ಯಾರಿಟಿ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆಮೇಲೆ ಟ್ಯಾಕ್ಸ್ ಬಗ್ಗೆ ಸ್ಪಷ್ಟವಾಗಿ ೩ ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆ. ಅವರಿಗೆ ಲಾಭ ಉಂಟು. ಆದ್ದರಿಂದ ಈ ನಷ್ಟವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಸಿದ್ದರಾಮಯ್ಯ.— ತಮಿಳುನಾಡು ಮತ್ತು ಕರ್ನಾಟಕದಲ್ಲಿ ಬಸ್ಸುಗಳ ಪ್ಯಾರಿಟಿ ಇಲ್ಲ ಎಂಬ ಮಾತನ್ನು ಹೇಳುತ್ತೇನೆ. ಇನ್ನು ದೂರದಲ್ಲಿ ಅವರಿಗಿಂತ ಹೆಚ್ಚು ದೂರವನ್ನು ನಾವು ಓಡಿಸುತ್ತಿದ್ದೇವೆ. ಇದು ಹಿಂದೆ ಆದಂಥ ಅಂತರ ರಾಜ್ಯ ಒಪ್ಪಂದ. ಈ ಒಪ್ಪಂದದ ಪ್ರಕಾರ ನಡೆದುಕೊಂಡು ಬರುತ್ತಾ ಇದೆ. ಆಮೇಲೆ, ಮಧ್ಯೆ ಮಾತುಕತೆಗಳು ನಡೆದಿವೆ, ಆದರೂ ಕೂಡ ಒಪ್ಪಂದಕ್ಕೆ ಬಂದಿಲ್ಲ. ಮುಂದೆ ಒಪ್ಪಂದಕ್ಕೆ ಬಂದಮೇಲೆ, ಮಾನ್ಯ ಸದಸ್ಯರು ಹೇಳತಕ್ಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಬಸ್ಸುಗಳನ್ನು ಓಡಿಸಲಾಗುವುದು ಆಮೇಲೆ, ಅವರು ಹೆಚ್ಚು ಬಸ್ಸುಗಳನ್ನು ಓಡಿಸುತ್ತಾರೆ, ನಾವು ಕಡಿಮೆ ಬಸ್ಸುಗಳನ್ನು ಓಡಿಸುತ್ತಿದ್ದೇವೆ, ಇದರಿಂದ ಅವರಿಗೇ ಹೆಚ್ಚು ಲಾಭವಾಗುತ್ತಿದೆ ನಮಗೆ ನಷ್ಟವಾಗುತ್ತಿದೆ ಎಂಬ ಮಾತನ್ನೂ ಹೇಳಿದ್ದಾರೆ. ನಾನು ಈ ಎಲ್ಲಾ ವಿಚಾರಗಳ ಪ್ರಾಸ್ ಅಂಡ್ ಕಾನ್ಸ್ ನೋಡಿ ಮುಂದೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇನ್ನು ಟ್ಯಾಕ್ಸ್ ಬಗ್ಗೆ ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಯಾವರೀತಿ ಆಗುತ್ತಿದೆ ಎಂಬುದನ್ನು ನೋಡಿ, ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ಹೇಳುತ್ತೇನೆ.

ಬೆಂಗಳೂರು ನಗರ ಸಾರಿಗೆ ಬಸ್ಸುಗಳನ್ನು ದೇವನಹಳ್ಳಿ ತನಕ ವಿಸ್ತರಿಸುವ ಬಗ್ಗೆ

೩೦೧೯. ಶ್ರೀ ಪಿ. ಸಿ. ಮುನಿಸ್ವಾಮಿಯಪ್ಪ (ದೇವನಹಳ್ಳಿ).— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಂಗಳೂರು ನಗರ ಸಾರಿಗೆಯು ಕೆಂಪು ಫಲಕದ ಬಸ್ಸುಗಳನ್ನು ದೇವನಹಳ್ಳಿಯವರೆಗೆ ಓಡಿಸಲಾಗುತ್ತಿದೆಯೇ,